# *Form No.4.*

# *Deposition Sheet( R.P.52)*

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**CC 217/2025**

**CW-4**

**PW-3**

ಸಾಕ್ಷಿಯ ಹೆಸರು : ಜೆಫ್ರಿಯನ್ ಡಯಾಸ್

ತಂದೆ ಹೆಸರು : ಜಾನ್ ಡಯಾಸ್

ಪ್ರಾಯ : 73 ವರ್ಷ

ಉದ್ಯೋಗ : ನಿವೃತ್ತ ಶಿಕ್ಷಕ

ವಾಸ : ಅಜೆಕಾರು

ದಿನಾಂಕ **: 26.12.2025** ರಂದು ಪಿಡಬ್ಲ್ಯೂ - 3 /ಸಿಡಬ್ಲ್ಯೂ - 4 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಹಿರಿಯ ಸ.ಸ.ಅ. ರವರಿಂದಃ

ಈಗ ನನಗೆ ತೋರಿಸಿದ ಮಹಜರು ಮತ್ತು ನಕಾಶೆಯಲ್ಲಿ ನನ್ನ ಸಹಿ ಇದ್ದು, ಅದನ್ನು ನಿಪಿ - 5 ಎಂದು ಹಾಗೂ ನಕಾಶೆಯನ್ನು ನಿಪಿ - 6 ಎಂದು ಗುರುತಿಸಲಾಯಿತು. ಅವುಗಳಲ್ಲಿನ ನನ್ನ ಸಹಿಗಳನ್ನು ಕ್ರಮವಾಗಿ ನಿಪಿ - 5(ಎ) ಮತ್ತು

ನಿಪಿ - 6(ಎ) ಎಂದು ಗುರುತಿಸಲಾಯಿತು. ಎರಡೂ ಸಹಿಗಳನ್ನು ಸುಮಾರು 6 ತಿಂಗಳ ಹಿಂದೆ ಪೋಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಈಗ ನನಗೆ ತೋರಿಸಿದ ಫೋಟೋದಲ್ಲಿ ನಾನು ಇದ್ದು, ಸದರಿ ಫೋಟೊವನ್ನು ನಿಪಿ - 7 ಎಂದು ಗುರುತಿಸಲಾಯಿತು. ಸದರಿ ಫೋಟೋವನ್ನು ಯಾವ ಉದ್ದೇಶಕ್ಕಾಗಿ ತೆಗೆದಿದ್ದಾರೆ ಎಂದು ನನಗೆ ತಿಳಿದಿಲ್ಲ. ನನ್ನ ಮನೆಯಿಂದ ಸ್ವಲ್ಪ ದೂರದಲ್ಲಿ ರಸ್ತೆಯ ಬದಿಯಲ್ಲಿ ನಿಲ್ಲಿಸಿ, ಫೋಟೋ ತೆಗೆದಿರುತ್ತಾರೆ. ನನ್ನ ಸಮಕ್ಷಮ ಯಾವುದೇ ಮಹಜರು ಮಾಡಿರುವುದಿಲ್ಲ. ಯಾವುದೇ ವಾಹನವನ್ನು ವಶಪಡಿಸಿಕೊಂಡಿರುವುದಿಲ್ಲ.

ಈ ಹಂತದಲ್ಲಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಬೇಕು ಎಂದು ಹಿರಿಯ.ಸ.ಸ.ಅ. ರವರು ಕೋರಿದ್ದು, ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.

<u>ಪಾಟೀ ಸವಾಲುಃ</u> ಹಿರಿಯ ಸ.ಸ.ಅ. ರವರಿಂದಃ

ದಿಃ 14.03.2025 ರಂದು ಪೋಲಿಸರು ನನ್ನನ್ನು ಮತ್ತು ಚಾಸಾ 5 ರವನ್ನು ನಮ್ಮ ಮನೆ ಬಳಿ ಇರುವ ಅಪಘಾತ ಸ್ಥಳಕ್ಕೆ ಕರೆಸಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ 2 ರವರು ಅಲ್ಲಿ ಹಾಜರಿದ್ದು, ಅಪಘಾತದ ಸ್ಥಳವನ್ನು ತೋರಿಸಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಮಧ್ಯಾಹ್ನ 3.10 ರಿಂದ 3.40 ರವರಗೆ ನಮ್ಮಗಳ ಸಮಕ್ಷಮ ನಿಪಿ - 5 ರಂತೆ ಮಹಜರು ಮಾಡಿ, ನಿಪಿ - 6 ರಂತೆ ನಕಾಶೆಯನ್ನು ತಯಾರಿಸಿ, ನಮಗೆ ಓದಿ ಹೇಳಿ, ನಂತರ ನಮ್ಮ ಸಹಿ

ಪಡೆದು, ನಿಪಿ - 7 ರಂತೆ ಫೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ಚಾಸಾ 2 ರವರು ತೋರಿಸಿದ ಆರೋಪಿಗೆ ಸಂಬಂಧಿಸಿದ ವಾಹನವನ್ನು ನಮ್ಮಗಳ ಸಮಕ್ಷಮ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ನನಗೆ ತಿಳಿದಿದ್ದರೂ ಸಹಾ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಇರುವುದಿಲ್ಲ.</u>

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,

ಕಾರ್ಕಳ.